ಮಡಕೇರಿ ತಾಲ್ಲೂಕಿನ ನಾಪೋಕ್ಲು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನವನ್ನು ಸ್ಮಶಾನಕ್ಕಾಗಿ ಒತ್ತುವರಿ ಮಾಡಿರುವುದು.

93 (626)ಶ್ರೀ ಡಿ.ಎಸ್.ಮಾದಪ್ಪ (ಮಡಿಕೇರಿ) 22.3.1999 : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಡಿಕೆರೆ ತಾಲ್ಲೂಕಿನ ನಾಪೊಕ್ಲುಸರ್ಕಾರಿ ಪದವಿ ಪೂರ್ವ ಕಾಲೇಜಿನ (ಪ್ರೌಢ ಶಾಲೆ ಆಟದ ಮೈದಾನಕ್ಕೆ ಸೇರಿರುವ) ಜಾಗವನ್ನು ಕೆಲವರು ಸ್ಮಶಾನಕ್ಕಾಗಿ ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಜಾಗವನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್.ಜಿ.ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ನಾಪೊಕ್ಲು ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಸೇರಿದ ಸುಮಾರು 52.00 ಎಕರೆ ಜಮೀನಿನ ಆಟದ ಮೈದಾನದ ಪೈಕಿ 2.50 ಎಕರೆ ಪ್ರದೇಶವನ್ನು ಸ್ಮಶಾನಕ್ಕೆಂದು ಕೊಡಗು ಜಿಲ್ಲೆಯ ಜಿಲ್ಲಾಧಿಕಾರಿಯವರು ಅವರ ಆದೇಶ ಸಂಖ್ಯೆ : ಎಲ್.ಎನ್.ಡಿಜೆ : ಇತರೆ 391 : 89-90, ದಿನಾಂಕ : 17.8.1990ರಲ್ಲಿ ಮಂಜೂರು ಮಾಡಿರುತ್ತದೆ ಎಂದು ಮತ್ತು ಸದರಿ ಪ್ರದೇಶದಬಗ್ಗೆ ವಿವಾದ ಇದೆ ಎಂದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಕಂದಾಯ ಇಲಾಖೆಯ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಿ ಅಕ್ರಮ ಒತ್ತುವರಿ ದಾರರನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಕಮಲಾಪುರ ಕ್ಷೇತ್ರದಲ್ಲಿ ನೀರಿನ ಸಮಸ್ಯೆ

96 (466) ಶ್ರೀ ರೇವುನಾಯ್ಕ, ಬೆಳಮಗಿ (ಕಮಲಪೂರ್) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಮೀಸಲು ಕ್ಷೇತ್ರದ ಕಿಣಸಡಕ್ ಅಂತಲ್ಲಗಾ ಮಾಸಲ್ಲಾಪುರ ತಾಂಡಾಗಳಲ್ಲಿ ನೀರಿನ ಸಮಸ್ಯೆ ಇರುವುದು ಸರ್ಕಾರದಗಮನಕ್ಕೆ ಬಂದಿದೆಯೇ ?

ಆ) ಬೋರ್‌ವೆಲ್ ನೀರು ಅತೀ ಆಳದಲ್ಲಿಇರುವುದರಿಂದ ವಾಟರ್ ಟ್ಯಾಂಕ್ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆಬಂದಿದೆಯೆ ?

ಇ) ಹಾಗಿದ್ದಲ್ಲಿ ಎಷ್ಟು ಹಳ್ಳಿಗಳಲ್ಲಿ ವಾಟರ್ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಲಾಗಿದೆ ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಕಿಣಸಡಕ್, ಅಂಕಲ್ಲಗಾ ಮತ್ತು ಮಾಸಲ್ಲಾಪುರ ತಾಂಡಾಗಳ ಜನಸಂಖ್ಯೆ 1991ರ ಜನಗಣತಿಯ ಪ್ರಕಾರ ಅನುಕ್ರಮವಾಗಿ 1448, 895 ಮತ್ತು 133 ಇದ್ದು, ಸದರಿ ಗ್ರಾಮಗಳಿಗೆ ಅನುಕ್ರಮವಾಗಿ ಕೊಳವೆ ನೀರು ಸರಬರಾಜು ಕಿರುನೀರು ಸರಬರಾಜು ಮತ್ತು ಕೈಪಂಪು ಕೊಳವೆಬಾವಿ ಒದಗಿಸಲಾಗಿದ್ದು, ಸದರಿ ಗ್ರಾಮಗಳಲ್ಲಿ ದಿನಂಪ್ರತಿ ತಲಾ 31.40 ಮತ್ತು 33 ಲೀಟರ್‌ಗಳ ಪ್ರಮಾಣದಲ್ಲಿ ನೀರನ್ನು ಪೂರೈಕೆ ಮಾಡಲಾಗುತ್ತಿದೆ.

ಆ) ಕಮಲಾಪುರ ಕ್ಷೇತ್ರದ ಕೆಲವು ಗ್ರಾಮಗಳಲ್ಲಿನ ಕೊಳವೆ ಬಾವಿಗಳಲ್ಲಿ ನೀರಿನ ಆಳ 35 ರಿಂದ 45 ಮೀಟರ್ ಇರುತ್ತದೆ.

ಇ) ಕಮಲಾಪುರ ಕ್ಷೇತ್ರದ 13 ಗ್ರಾಮಗಳಲ್ಲಿ ಜಲ ಸಂಗ್ರಹಾಲಯಗಳನ್ನು ನಿರ್ಮಾಣ ಮಾಡಲಾಗಿದೆ.

ರಾಜ್ಯದಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಕುಡಿಯುವ ನೀರಿನ ಯೋಜನೆ

98 (832) ಶ್ರೀ ವಸಂತ ವಿ. ಸಾಲಿಯಾನ್ (ಕಾಪು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ರಾಜ್ಯದಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಎಷ್ಟು ಕುಡಿಯುವ ನೀರಿನ ಯೋಜನೆಗಳು ಮಂಜೂರಾತಿ ಆಗಿವೆ. ಅವುಗಳಲ್ಲಿ ಎಷ್ಟು ಯೋಜನೆಗಳು ಪೂರ್ಣಗೊಂಡಿವೆ ?

ಆ) ಕಾಪು ವಿಧಾನ ಸಭಾ ಕ್ಷೇತ್ರದಲ್ಲಿ ವಿಶ್ವ ಬ್ಯಾಂಕ್ ನೆರವಿನನ್ವಯ ಮಂಜೂರಾತಿಯಾದ ಕುಡಿಯುವ ನೀರಿನ ಯೋಜನೆಗಳ ಸಂಖ್ಯೆ ಎಷ್ಟು ?

ಇ) ಅದರಲ್ಲಿ ಮಂಜೂರಾತಿಯಾದ ಯೋಜನೆಗಳ ಕಾಮಗಾರಿಗಳ ನಿರ್ಮಾಣ ಯಾವ ಹಂತದಲ್ಲಿದೆ. ಆ ಬಗ್ಗೆ ಇದುವರೆಗೆ ಖರ್ಚುಮಾಡಿದ ಹಣವೆಷ್ಟು ? (ಪ್ರತ್ಯೇಕವಾಗಿಯೋಜನವಾರು ತಿಳಿಸುವುದು)

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವರು) :

ಆ) ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ಪರಿಸರ ನೈರ್ಮಲ್ಯ ಯೋಜನೆಯಲ್ಲಿ ರಾಜ್ಯದ 16 ಜಿಲ್ಲೆಗಳ (ಹಿಂದಿನ 12 ಜಿಲ್ಲೆಗಳ) ಒಟ್ಟು 1202 ಗ್ರಾಮ ಗಳು ಸೇರಿವೆ. ಈ ಯೋಜನೆಯನ್ನು 4 ಹಂತಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಪ್ರಾಯೋಗಿಕ ಹಂತ	011 ಗ್ರಾಮಗಳು
1ನೇ ಹಂತ	238 ಗ್ರಾಮಗಳು
2ನೇ ಹಾಗೂ 3ನೇ ಹಂತ	873 ಗ್ರಾಮಗಳು
ಒಟ್ಟು	**1122 ಗ್ರಾಮಗಳು**

ಅವುಗಳಲ್ಲಿ 164 ಯೋಜನೆಗಳ ಕಾಮಗಾರಿಗಳು ಪೂರ್ಣಗೊಂಡಿವೆ. ವಿವರ ಈಕೆಳಕಂಡಂತಿದೆ.

ಪ್ರಾಯೋಗಿಕ ಹಂತ	010 ಗ್ರಾಮಗಳು
1ನೇ ಹಂತ	126 ಗ್ರಾಮಗಳು
2ನೇ ಹಾಗೂ 3ನೇ ಹಂತ	028 ಗ್ರಾಮಗಳು
ಒಟ್ಟು	**164 ಗ್ರಾಮಗಳು**